ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 4ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು: ಪ್ರಸ್ತಾವ ಏನೆಂದರೆ:

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೆ, "ಕರ್ನಾಟಕ ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2005ನೇ ಸಾಲಿನ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಯಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ"

ಅಧ್ಯಕ್ಷರು: ಪ್ರಸ್ತಾವ ಏನೆಂದರೆ:

"ಕರ್ನಾಟಕ ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2005ನೇ ಸಾಲಿನ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

10. ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

ವಿದ್ಯುಚ್ಛಕ್ತಿ (ಕರ್ನಾಟಕ ತಿದ್ದುಪಡಿ) ವಿಧೇಯಕ, 2005

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು): ಮಾನ್ಯ ಅಧ್ಯಕ್ಷರೆ, "2005ನೇ ಸಾಲಿನ ವಿದ್ಯುಚ್ಛಕ್ತಿ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

ಪ್ರಸ್ತಾವವನ್ನು ಮಂಡಿಸಲಾಯಿತು

ಅನುಬಂಧ VII

ಅಧ್ಯಕ್ಷರು: ಇದರ ಬಗ್ಗೆ ವಿವರಣೆಯನ್ನು ಕೊಡಿ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, 2005ನೇ ಸಾಲಿನ ವಿದ್ಯುಚ್ಛಕ್ತಿ 2003ನೇ ಅಧಿನಿಯಮ 30ರನ್ವಯ ಸಂಬಂಧಪಟ್ಟ ತಿದ್ದುಪಡಿಯನ್ನು ಮಂಡಿಸುತಿದ್ದೇನೆ. ಇದಕ್ಕೆ ಅಂಗೀಕಾರ ಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಇದರ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಇತರ ಮುಖಂಡರುಗಳ ಹತ್ತಿರ ಮಾತನಾಡಿದ್ದೇನೆ. ಅಡ್ಮಿನಿಸ್ಟ್ರೇಟಿವ್ ಆರ್ಡರ್ ಮಾಡುವಂಥ

ಸಂದರ್ಭದಲ್ಲಿ ಆಡಳಿತಾತ್ಮಕವಾಗಿ ಮಾಡಿ, ಭಾಗ್ಯಜ್ಯೋತಿ, ಕುಟೀರಜ್ಯೋತಿ ಮತ್ತು ಐ.ಪಿ. ಸೆಟ್ಸ್ ಇವುಗಳಿಗೆ ಫಿರ್ಯಾದೆ ದಾಖಲು ಮಾಡಬಾರದು ಎನ್ನುವ ಬಗ್ಗೆ ಒಂದು ಅಡ್ಮಿನಿಸ್ಟ್ರೇಟಿವ್ ಆರ್ಡರನ್ನು ಸೆಪರೇಟಾಗಿ ಮಾಡುತ್ತೇವೆ. ಆದಕಾರಣ ಈ ವಿಧೇಯಕಕ್ಕೆ ಅಂಗೀಕಾರ ಕೊಡಬೇಕೆಂದು ಮಾನ್ಯ ವಿರೋಧ ಪಕ್ಷದ ನಾಯಕರಿಗೂ....

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ): ಪ್ರತ್ಯೇಕವಾಗಿ ಅಡ್ಮಿನಿಸ್ಟ್ರೇಟಿವ್ ಆರ್ಡರ್ ಮಾಡುತ್ತೇವೆ, ರೂಲ್ಸ್ ಮಾಡುತ್ತೇವೆ ಶಾಸನದಲ್ಲಿ ಎಂದು ಮಿನಿಸ್ಟರ್ ಹೇಳುವುದಕ್ಕೆ ಬರುವುದಿಲ್ಲ. ನೀವು ಅದನ್ನು ಅಬ್ಜೆಕ್ಟೀವ್ಸ್‌ನಲ್ಲಾದರೂ ಹೇಳಿ ಅಥವಾ ಒಂದು ಎಗ್ಸೆಂಪ್‌ಷನ್ ಕ್ಲಾಸನ್ನಾದರೂ ಹಾಕಿಕೊಂಡು ಹೇಳಿ. ನಿಯಮಗಳನ್ನು ನಿಯಮದಂತೆ ಮಾಡಬೇಕು. ಇಂಥಿಂಥವರಿಗೆ ವಿನಾಯಿತಿ ನೀಡಿದ್ದೇವೆ, ಇದು ಭಾಗ್ಯಜ್ಯೋತಿಯವರಿಗೆ ಅಥವಾ ರೈತರಿಗೆ ಅನ್ವಯಿಸುವುದಿಲ್ಲ ಎನ್ನುವುದನ್ನಾದರೂ ತಾವು ಬಿಲ್‌ನಲ್ಲಿ ಹೇಳಬೇಕು. ಇಲ್ಲಿ ನಾವು ಇದನ್ನು ಪಾಸ್ ಮಾಡಿಯಾದ ಮೇಲೆ ಅವರು ಅಡ್ಮಿನಿಸ್ಟ್ರೇಟಿವ್ ಆರ್ಡರ್ ಏನು ಮಾಡುತ್ತಾರೋ, ಅದರ ಕೆಳಗೆ ಏನು ರೂಲ್ಸ್ ಮಾಡುತ್ತಾರೋ ಅದು ಈ ಶಾಸನ ಸಭೆಗೆ ಸಂಬಂಧಿಸಿರುವುದಿಲ್ಲ. You must specifically say it in the objects. ಆಬ್ಜೆಕ್ಟೀವ್ಸ್‌ನಲ್ಲಾದರೂ, ಇಂಥ ಕೆಟಗರಿಗೆ ಅನ್ವಯವಾಗುತ್ತದೆ ಎಂದು ಹೇಳಿ, ಅದನ್ನು ಬಿಲ್‌ನಲ್ಲಿ ಇನ್‌ಕಾರ್ಪೊರೇಟ್ ಮಾಡಬೇಕು. ಈಗ ಪಾಸ್ ಮಾಡಿಸಲು ಏಕೆ ಆತುರ ಪಡುತ್ತೀರಿ? ನಾವು ಹೇಳಿದುದ್ದನ್ನು ಸೇರಿಸಿ, ನಾಳೆ ಬೆಳಿಗ್ಗೆ ತರಲಿ ಈ ಬಿಲ್ ಅನ್ನು, ನಾವು ಪಾಸ್ ಮಾಡಿಕೊಡುತ್ತೇವೆ. ವಿರೋಧ ಪಕ್ಷದಲ್ಲಿದ್ದು ನಾವು ನೋಡಿಬಿಟ್ಟಿದ್ದೇವೆ. ಭೂತವನ್ನು, ಬೇತಾಳವನ್ನು, ಟಿ.ವಿ.ಯಲ್ಲಿ ಬಂದದ್ದು, ಹೋದದ್ದು ಎಲ್ಲವನ್ನೂ ನೋಡಿದ್ದೇವೆ. ರೈತರಿಗೆ ಇವರು ಹೆರಾಸ್ ಮಾಡಿದರಲ್ಲಾ, ಕಳ್ಳತನ ಮಾಡುತ್ತಿದ್ದೀರಿ, ಚೋರಿ ಮಾಡುತ್ತಿದ್ದೀರಿ, ನಿಮ್ಮ ಮೇಲೆ ಕೇಸ್ ಹಾಕುತ್ತೇವೆ, ಅಂಥ ದಂಡ ಹಾಕುತ್ತೇವೆ, ಇಂಥ ದಂಡ ಹಾಕುತ್ತೇವೆ, ಇಂಥ ಕಲಂನಲ್ಲಿ ಹಾಕುತ್ತೇವೆ ಎಂದು ಹೇಳಿದಿರಲ್ಲಾ, ಇವತ್ತು ಆ ಕಾನೂನುಗಳೆಲ್ಲ ಎಲ್ಲಿ ಹೋದವು? ಆವತ್ತು ತಾವೂ ನಮ್ಮ ಹಾಗೇ ಸೋತಿದ್ದೀರಿ. ಒಂದೂವರೆ ವರ್ಷ, ಎರಡು ವರ್ಷಗಳ ಕಾಲ ಒಂದೇ ಸಮನೆ ಟಿ.ವಿ.ಯಲ್ಲಿ ಇವರು ಪ್ರಚಾರ ಮಾಡಿದರು, ರೈತರನ್ನು, ಕಳ್ಳರನ್ನು ಹೀಗೆ ಜೈಲಿಗೆ ಹಾಕುತ್ತೇವೆ, ನಿಮಗೆ ಈ ಶಿಕ್ಷೆ ಕೊಡುತ್ತೇವೆ, ಆ ಶಿಕ್ಷೆ ಕೊಡುತ್ತೇವೆ ಎಂದು ಪ್ರಚಾರ ಮಾಡಿದರು. Entire advertisement cost of KEB/ KPTCL ಬರೀ ನಮ್ಮನ್ನು ಜೈಲಿಗೆ ಹಾಕಲು ಟಿ.ವಿ.ಯಲ್ಲಿ ಪ್ರತಿಬಿಂಬಿಸಲು ಖರ್ಚಾಯಿತು. ಟಿ.ವಿ. ಆನ್ ಮಾಡಿದರೆ ಸಾಕು, ವಿದ್ಯುತ್ ಕಳ್ಳರಿಗೆ ಇಂಥಿಂಥ ಶಿಕ್ಷೆ ಎಂದು ಬರುತ್ತಿತ್ತು. ನಾವು ಲಾ ಓದುವುದೇ ಬೇಕಿರಲಿಲ್ಲ, ಟಿ.ವಿಯ.ಲ್ಲೇ ಎಂಟೈರ್ ಕೆ.ಇ.ಬಿ. ಸ್ಯಾಟ್ಯೂಟ್ಸ್ ಅನ್ನೇ ಓದಬಹುದಾಗಿತ್ತು. ಇದು ರೈತರಿಗೆ ಅನ್ವಯವಾಗುವುದಿಲ್ಲ, ಭಾಗ್ಯಜ್ಯೋತಿಯವರಿಗೆ ಅನ್ವಯವಾಗುವುದಿಲ್ಲ ಎಂದು ದಯಮಾಡಿ ತಾವು ಸ್ಪಷ್ಟವಾಗಿ ಹೇಳಬೇಕು. ಕೋರ್ಟ್ ಪರ್ಮಿಷನ್ ತೆಗೆದುಕೊಂಡು ಡೈರೆಕ್ಟ್ ಚಾರ್ಜ್‌ಷೀಟ್ ಹಾಕಲು ಇದನ್ನು ಇಟ್ಟುಕೊಂಡಿದ್ದೀರಿ. ಈಗ ಏನಿದೆ ಎಂದರೆ, ಎಫ್.ಐ.ಆರ್. ಮೇಲೆ ಪೊಲೀಸರು ಕೇಸ್ ಹಾಕುತ್ತಾರೆ, ಚಾರ್ಜ್‌ಷೀಟ್ ಹಾಕಲು ಕೋರ್ಟ್‌ನಿಂದ ಪರ್ಮಿಷನ್ ತೆಗೆದುಕೊಳ್ಳಬೇಕು ಎಂದು ಇರುವುದನ್ನು ಡೈರೆಕ್ಟ್ ಚಾರ್ಜ್‌ಷೀಟ್ ಹಾಕಲು ಅಧಿಕಾರ ಕೇಳುತ್ತಿದ್ದಾರೆ. ಇದರಲ್ಲಿ ಇವರು ಇದನ್ನಷ್ಟೇ ಕೇಳುತ್ತಿದ್ದಾರೆ. ಕೋರ್ಟ್ ಪರ್ಮಿಷನ್ ಕೊಡುತ್ತದೆ ಬಿಡಿ, ಅಷ್ಟರಲ್ಲಿ

ಏನಾಗುತ್ತದೆ. ಡಿಲೇ ಆದರೆ ಆಗಲಿ ಬಿಡಿ. ಈಗ ಕೋರ್ಟಿಗೆ ಹೋದಂಥವುಗಳೆಲ್ಲಾ ನಾಳೆ ಬೆಳಗ್ಗೆಯೇ ಇತ್ಯರ್ಥವಾಗುತ್ತಿವೆಯೇ? ತಾವೂ ಒಬ್ಬರು ಅಡ್ವೊಕೇಟ್, ಪ್ರಾಕ್ಟೀಸ್ ಮಾಡಿರುವವರು, ಲಾ ಪಾಠ ಮಾಡಿರುವವರು. ಸೀರಿಯಸ್‌ನೆಸ್ ಹೋಗುತ್ತದೆ ಎಂದು ಕೋರ್ಟ್ ಜ್ಯೂರಿಸ್ಡಿಕ್ಷನ್ನನ್ನೇ ಕಡಿಮೆ ಮಾಡಿಕೊಂಡು ಬಂದರೆ ಹೇಗೆ? ದಯಮಾಡಿ, you must say it in the Act itself that it is not applicable to IP sets and Bhagyajyothi. ಆಗ ಮಾತ್ರ ನಾವು ಇದನ್ನು ಒಪ್ಪುತ್ತೇವೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ): ಅವರು ಏನು ವಿಚಾರಗಳನ್ನು ಹೇಳಿದ್ದಾರೆ, ಅವುಗಳನ್ನು ಬಿಲ್‌ನಲ್ಲಿ ಈಗಲೇ ಇನ್‌ಕಾರ್ಪೊರೇಟ್ ಮಾಡಿಕೊಂಡು ಬಿಡಲಿ. ಅದನ್ನು ಇನ್‌ಕಾರ್ಪೊರೇಟ್ ಮಾಡಿಕೊಂಡು ಸದನಕ್ಕೆ ತಂದರೆ, ಅದನ್ನು ಸ್ವಲ್ಪ ತಿದ್ದುಪಡಿ ಮಾಡಿದರೆ ಒಳ್ಳೆಯದಾಗುತ್ತದೆ.

ಅಧ್ಯಕ್ಷರು: ಅದನ್ನು ಇಲ್ಲಿ ಇನ್‌ಕಾರ್ಪೊರೇಟ್ ಮಾಡಿಕೊಂಡು ಸಭೆ ಅಂಗೀಕರಿಸಬಹುದಲ್ಲವೇ?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಆಯಿತು, ಇನ್‌ಕಾರ್ಪೊರೇಟ್ ಮಾಡಿ.

ಶ್ರೀ ಜೆ.ಸಿ. ಮಾಧುಸ್ವಾಮಿ: ಇನ್‌ಕಾರ್ಪೊರೇಟ್ ಮಾಡಿದರೆ ನಮ್ಮದೇನೂ ಅಬ್ಜಕ್ಷನ್ ಇಲ್ಲ.

ಶ್ರೀ ಹೆಚ್.ಡಿ. ರೇವಣ್ಣ: ಅಡ್ಮಿನಿಸ್ಟ್ರೇಟಿವ್ ಆರ್ಡರ್‌ನಲ್ಲಿ ಮಾಡುತ್ತೇವೆ ಎಂದು ಹೇಳಿದ್ದೇವೆ ಸಾರ್.

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಯವರು): ಅದರಲ್ಲೇ ಇನ್‌ಕಾರ್ಪೊರೇಟ್ ಮಾಡಿಕೊಳ್ಳಲಿ. ಅಮೆಂಡ್‌ಮೆಂಟ್ ಏನೂ ಬೇಡ. ಅಬ್ಜೆಕ್ಟ್‌ನಲ್ಲಿ ಇನ್‌ಕಾರ್ಪೊರೇಟ್ ಮಾಡಿಕೊಳ್ಳಲಿ.

ಶ್ರೀ ಜೆ.ಸಿ. ಮಾಧುಸ್ವಾಮಿ: ನೀವು ಇನ್‌ಕಾರ್ಪೊರೇಟ್ ಮಾಡಿ ಸ್ವಾಮಿ.

ಶ್ರೀ ಹೆಚ್.ಡಿ. ರೇವಣ್ಣ: ಅಡ್ಮಿನಿಸ್ಟ್ರೇಟಿವ್ ಆರ್ಡರ್‌ನಲ್ಲಿ ಸೆಪರೇಟಾಗಿ ಹೇಳುತ್ತೇವೆ ಎಂದು ವಿರೋಧ ಪಕ್ಷದ ನಾಯಕರ ಹತ್ತಿರ ಮಾತನಾಡಿದ್ದೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಅಡ್ಮಿನಿಸ್ಟ್ರೇಟಿವ್ ಆರ್ಡರ್, ರೂಲ್ಸ್‌ಗಳನ್ನು ನಾವು ಒಪ್ಪುವುದಿಲ್ಲ. ಆಕ್ಟ್‌ನಲ್ಲೇ ಇನ್‌ಕಾರ್ಪೊರೇಟ್ ಮಾಡಬೇಕು.

ಶ್ರೀ ಹೆಚ್.ಡಿ. ರೇವಣ್ಣ: ಆಯಿತು, ಮಾಡುತ್ತೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಅಧ್ಯಕ್ಷರೇ, ಇದನ್ನು ತಾವು ಮಾಡಿ. Kindly incorporate ತಾವು ಮಾಡಬಹುದು, ತಾವು ಇನ್‌ಕಾರ್ಪೊರೇಟ್ ಮಾಡಿ. ಇಂಥವರನ್ನು ಹೊರತುಪಡಿಸಿ ಎಂದು ಒಂದು ಲೈನ್ ಸೇರಿಸಿ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಒಂದು ಸೆಂಟೆನ್ಸ್ ಸೇರಿಸಿಕೊಂಡು ನೀವು ಮಾಡಿ.

ಅಧ್ಯಕ್ಷರು: ಅದನ್ನು ಮಾಡುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು): ಐ.ಪಿ. ಸೆಟ್ಸ್, ಕುಟೀರಜ್ಯೋತಿ, ಭಾಗ್ಯಜ್ಯೋತಿ ಇವುಗಳನ್ನು ಹೊರತುಪಡಿಸಿ ಎಂದು ನೀವು ಇನ್‌ಕಾರ್ಪೊರೇಟ್

ಮಾಡಿ, ಪಾಸ್ ಮಾಡಿಸಿ, ಅದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ.

ಶ್ರೀ ಹೆಚ್.ಡಿ. ರೇವಣ್ಣ: ಇಲ್ಲ ಸಾರ್, ಹಾಗೆ ಮಾಡಲು ಬರುವುದಿಲ್ಲ.

ಅಧ್ಯಕ್ಷರು: ಅಬ್ಜೆಕ್ಷನ್‌ನಲ್ಲಿ ಮಾಡುತ್ತೀರೇನು?

ಶ್ರೀ ಬಿ.ಎಸ್ ಯಡಿಯೂರಪ್ಪ: ಇಲ್ಲ ಸರ್, ಇದರಲ್ಲೇ ಆಗಬೇಕು.

ಶ್ರೀ ಹೆಚ್.ಡಿ. ರೇವಣ್ಣ: ಆಬ್ಜಕ್ಷನ್‌ನಲ್ಲಿ ಮಾಡಬಹುದೇ ಹೊರತು ಇದರಲ್ಲಿ ಮಾಡಲು ಬರುವುದಿಲ್ಲ. ವಿರೋಧ ಪಕ್ಷದ ನಾಯಕರ ಜೊತೆ, ನಮ್ಮ ಆಫೀಸರ್‌ಗಳ ಜೊತೆ ಈಗಾಗಲೇ ಮಾತನಾಡಿದ್ದೇನೆ. ನಾನೂ ರೈತರ ಪರವಾಗಿಯೇ ಇದ್ದೇನೆ. ರೈತರನ್ನು ಬಿಟ್ಟು ಮಾಡುವುದಿಲ್ಲ. ಇದಕ್ಕೆ ಬೇಕಾದರೆ, ಒಂದು ಕ್ಲಿಯರ್ ಕಟ್ ಆಗಿ ಸರ್ಕಾರಿ ಆದೇಶವನ್ನೇ ಹೊರಡಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ನಿಮ್ಮ ವಿಷಯ, ನಮ್ಮ ವಿಷಯಗಳಲ್ಲಿ ಏನೂ ವ್ಯತ್ಯಾಸವಿಲ್ಲ. ಅಧ್ಯಕ್ಷರಿಗೆ ಅಧಿಕಾರವಿದೆ. ಅದರಂತೆ ಅದನ್ನು ಇನ್‌ಕಾರ್ಪೊರೇಟ್ ಮಾಡಿಬಿಟ್ಟು ಪಾಸ್ ಮಾಡೋಣ. ಅದು ಒಂದೇ ನಿಮಿಷದಲ್ಲಿ ಆಗುತ್ತದೆ. ಅದನ್ನು ನೀವು ಸೇರಿಸಿ ಮಾಡಿ. ಅದಕ್ಕೆ ನಮ್ಮದೂ ಒಪ್ಪಿಗೆಯಿದೆ, ಅವರದೂ ಒಪ್ಪಿಗೆಯಿದೆ.

ಅಧ್ಯಕ್ಷರು: ಅಮೆಂಡ್‌ಮೆಂಟ್ ಮೂವ್ ಆಗಬೇಕಲ್ಲವೇ?

ಶ್ರೀ ಬಿ.ಎಸ್. ಯಡಿಯೂರಪ್ಪ: ಅದಕ್ಕೆ ಅವರು ಒಪ್ಪುತ್ತಿದ್ದಾರೆ.

ಶ್ರೀ ಹೆಚ್.ಡಿ. ರೇವಣ್ಣ: ಅದಕ್ಕೆ ಸಪರೇಟಾಗಿ ಅಡ್ಮಿನಿಸ್ಟ್ರೇಟಿವ್ ಆರ್ಡರ್ ಮಾಡಬಹುದು. ಅದನ್ನು ಸೆಪರೇಟಾಗಿ ಮಾಡುತ್ತೇವೆ, ನನ್ನ ಮೇಲೆ ನಂಬಿಕೆ ಇಡಿ. ನಾನು ಕೇಳಿದ್ದೇನೆ, ಬಿಲ್‌ನಲ್ಲಿ ಈ ರೀತಿ ಮಾಡಲು ಬರುವುದಿಲ್ಲ. ಲೀಗಲ್ ಆಫೀಸರ್ಸ್, ವಿರೋಧ ಪಕ್ಷದ ನಾಯಕರು ಎಲ್ಲರ ಜೊತೆ ಕುಳಿತು ಚರ್ಚೆ ಮಾಡಿದ್ದೇನೆ. ಮಾಧುಸ್ವಾಮಿಯವರ ಜೊತೆಗೂ ಚರ್ಚೆ ಮಾಡುತ್ತೇನೆ. ದಯಮಾಡಿ ಇದನ್ನು ಅಂಗೀಕಾರ ಮಾಡಿಕೊಡಬೇಕೆಂದು ಮನವಿ ಮಾಡುತ್ತಿದ್ದೇನೆ.

ಅಧ್ಯಕ್ಷರು: ರೈತರು, ಐ.ಪಿ. ಸೆಟ್ಸ್‌ನವರು, ಭಾಗ್ಯಜ್ಯೋತಿಯವರನ್ನು ಬಿಟ್ಟು ಎಂದು ಮಾಡಿ.

ಶ್ರೀ ಹೆಚ್.ಡಿ. ರೇವಣ್ಣ: ಇಲ್ಲ ಅಧ್ಯಕ್ಷರೇ, ಆ ರೀತಿ ಮಾಡಲು ಬರುವುದಿಲ್ಲ.

ಅಧ್ಯಕ್ಷರು: ಯಡಿಯೂರಪ್ಪನರೇ, ಈಗ ಪ್ರಸ್ತಾವವನ್ನು ತೆಗೆದುಕೊಳ್ಳೋಣ. ರೈತರ ಪಂಪುಸೆಟ್ಟು ಮತ್ತು ಭಾಗ್ಯಜ್ಯೋತಿಯವರನ್ನು ಬಿಟ್ಟು.

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು): ಇದರಲ್ಲಿ ಭಾಗ್ಯಜ್ಯೋತಿ, ಕುಟೀರ ಜ್ಯೋತಿ ಎನ್ನುವ ಪ್ರಶ್ನೆಯೇ ಉದ್ಭವವಾಗಿರಲಿಲ್ಲ. ಏಕೆಂದರೆ, ಭಾಗ್ಯಜ್ಯೋತಿ, ಕುಟೀರಜ್ಯೋತಿನಲ್ಲಿ ಒಂದು ಬಲ್ಬ್‌ಗೆ 18 ಯೂನಿಟ್ ಆಗಬಹುದೆಂದು ನಾವು ಈಗಾಗಲೇ ತೀರ್ಮಾನ ಮಾಡಿದ್ದೇವೆ, ಹಾಗೆ ಎಷ್ಟು ಆಗುತ್ತದೋ ಅಷ್ಟಕ್ಕೆ ಪುಕ್ಕಟ್ಟೆ ಕೊಡಬೇಕು, ಉಳಿದಿರುವುದಕ್ಕೆ ಮೋಟರ್ ಅಳವಡಿಸಿ ಒಂದು ಬಲ್ಬ್‌ಗಿಂತ ಹೆಚ್ಚು ಹಾಕಿಕೊಂಡಿರುವವರಿಂದ ವಸೂಲಿ ಮಾಡಬೇಕೆಂದು ಇದ್ದೇವೆ. Theft ಅವೆಲ್ಲಾ ಪ್ರಶ್ನೆ ಬರುವುದೇ ಇಲ್ಲ. ಯಾರು ಉದ್ದೇಶಪೂರ್ವಕವಾಗಿ ಕಳ್ಳತನ ಮಾಡುತ್ತಾರೆ ಅವರಿಗೆ ಮಾತ್ರ ಮಾಡುತ್ತಿರತಕ್ಕಂಥದ್ದೇ ಹೊರತು ರೈತರಿಗೆ ಕುಟೀರಜ್ಯೋತಿ beneficiaries ಭಾಗ್ಯಜ್ಯೋತಿ ಫಾಲುಭವಿಗಳಿಗೆ ತೊಂದರೆಯಾಗುವುದಿಲ್ಲ.

ಶ್ರೀ ಹೆಚ್. ನಿಂಗಪ್ಪ (ಕುಣಿಗಲ್): ಮಾನ್ಯ ಅಧ್ಯಕ್ಷರೆ, ವಿದ್ಯುಚ್ಛಕ್ತಿ ಅಪರಾಧಗಳಡಿಯಲ್ಲಿ ಯಾರಾದರೂ ತಪ್ಪು ಮಾಡಿದರೆ Vigilance Police ನವರು ಏನಿದ್ದರು ಅವರೇ FIR ಹಾಕಿಬಿಟ್ಟು ಕೋರ್ಟ್‌ಗೆ FIR ಅನ್ನು ಕಳುಹಿಸುತ್ತಿದ್ದರು. ಕೋರ್ಟ್ ಮತ್ತೆ ಚಾರ್ಜ್‌ಶೀಟ್ ಹಾಕಬೇಕಾದರೆ ಮತ್ತೆ ಕೋರ್ಟಿನಿಂದಲೇ Magistrate ರವರ permission ತೆಗೆದುಕೊಂಡು ಮತ್ತೆ charge-sheet ಅನ್ನು ಹಾಕುತ್ತಾ ಇದ್ದರು. ಆದರೆ ಇಲ್ಲಿ ತಿದ್ದುಪಡಿ ವಿಧೇಯಕದ ರೀತಿಯಲ್ಲಿಯೇ cognizance ಅನ್ನು ನೇರವಾಗಿ ಈ Vigilance, Police ನವರೇ cognizance ಅನ್ನು ತೆಗೆದುಕೊಳ್ಳಬೇಕಾದಂಥ ಒಂದು ನಿಯಮವನ್ನು ಇವತ್ತು ಜಾರಿಗೆ ತರುತ್ತಿದ್ದಾರೆ. ಆದ್ದರಿಂದ ಇದಕ್ಕೆ ವಿಶೇಷವಾಗಿ ಅಥವಾ ಇದಕ್ಕೆ ಒಂದು ಈ ಭಾಗ್ಯಜ್ಯೋತಿ ಮತ್ತು ಕುಟೀರ ಜ್ಯೋತಿ ಬಗ್ಗೆ ಅದಕ್ಕೆ ಅಲಾಯಿದವಾಗಿ ಏನೊಂದು ಆದೇಶವನ್ನು ತರಬೇಕಾದಂಥ ಅವಶ್ಯಕತೆಯಿಲ್ಲ. ಆದ್ದರಿಂದ ಈ ವಿಧೇಯಕ ಏನು ಸದನದ ಮುಂದಿದೆ ಇದನ್ನು ಯಥಾಸ್ಥಿತಿಯಾಗಿ ಅಂಗೀಕರಿಸಬೇಕಾಗುತ್ತದೆ. ಅಂಗೀಕರಿಸಬಹುದು. ಇದರಲ್ಲಿ ಯಾವುದೇ ತೊಂದರೆ ಇಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ: ನಾನು ಇದಕ್ಕೆ objection ಮಾಡುತ್ತೇನೆ. ಮಾನ್ಯ ಅಧ್ಯಕ್ಷರೆ, COD ಗೆ Vigilance ಗೆ direct jurisdictions ಸ್ಥಾನ ಯಾರೂ ಕೊಟ್ಟಿಲ್ಲ. Vigilance ಏನಿದ್ದಾರೆ ಅವರು Vigilance ಆಗಿಯೇ ಕೆಲಸ ಮಾಡಬೇಕು. ಅವರು direct police ಅಲ್ಲ. ಅವರು contingencies ತೆಗೆದುಕೊಂಡು ಬರುತ್ತಾರೆ FIR ಹಾಕುತ್ತಾರೆ, ಆ ಮೇಲೆ regular ಆಗಿ charge-sheet ಅನ್ನು Magistrate ರ permission ತೆಗೆದುಕೊಂಡು ಹಾಕುತ್ತಾರೆ.

ಅಧ್ಯಕ್ಷರು: ಈಗ ರೈತರ ಐ.ಪಿ. ಸೆಟ್ ಬಿಟ್ಟು ಎಂದು ಹೇಳುತ್ತಿದ್ದಾರಲ್ಲಾ.

ಶ್ರೀ ಜೆ.ಸಿ. ಮಾಧುಸ್ವಾಮಿ: ಅಷ್ಟು ಮಾಡಿ ಸಾರ್.

ಶ್ರೀ ಸಿದ್ಧರಾಮಯ್ಯ: ಇದರ objects and reasons ಇದೆಯಲ್ಲಾ ಅದರಲ್ಲಿ 'ಪಂಪುಸೆಟ್ಟುಗಳು ಭಾಗ್ಯಜ್ಯೋತಿ ಮತ್ತು ಕುಟೀರಜ್ಯೋತಿ ಹೊರತುಪಡಿಸಿ' ಎಂದು ಬೇಕಾದರೆ ಸೇರಿಸಿಕೊಳ್ಳೋಣ.

ಶ್ರೀ ಬಿ.ಎಸ್. ಯಡಿಯೂರಪ್ಪ: ಆಗಬಹುದು ಸರ್.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ;

"2005ನೇ ಸಾಲಿನ ವಿದ್ಯುಚ್ಛಕ್ತಿ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2

ಅಧ್ಯಕ್ಷರು: ಪ್ರಶ್ನೆ ಏನೆಂದರೆ "ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2ನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ಹೆಸರು ಮತ್ತು ಅವತರಣಿಕೆಗಳು ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ಹೆಸರು ಮತ್ತು ಅವತರಣಿಕೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು): ಮಾನ್ಯ ಅಧ್ಯಕ್ಷರೆ, 2005ನೇ ಸಾಲಿನ ವಿದ್ಯುಚ್ಛಕ್ತಿ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ;

"2005ನೇ ಸಾಲಿನ ವಿದ್ಯುಚ್ಛಕ್ತಿ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ತಾವು ಈ ಬಿಲ್‌ನ್ನು ಕೌನ್ಸಿಲ್‌ಗೆ ಕಳುಹಿಸಬೇಕಾದರೆ ಐಪಿ ಸೆಟ್ಟುಗಳು, ಭಾಗ್ಯಜ್ಯೋತಿ ಕುಟೀರ ಜ್ಯೋತಿಗಳನ್ನು ಬಿಟ್ಟು ಎಂದು ಇಲ್ಲಿಂದ ಸೇರಿಸಿ ಕಳುಹಿಸಿಕೊಡಬೇಕು.

ಅಧ್ಯಕ್ಷರು: ಆಗಬಹುದು objects and reasons ಇದರಲ್ಲಿ ಸೇರಿಸಿ ಕಳುಹಿಸಿಕೊಡುತ್ತೇವೆ.

12. ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮೇಲಿನ ಮುಂದುವರೆದ ಚರ್ಚೆ

ಶ್ರೀ ಎಸ್. ರಾಜೇಂದ್ರನ್ (ಕೆ.ಜಿ.ಎಫ್): ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದ Administration and Development ಬಗ್ಗೆ ಮಾತನಾಡುವುದಕ್ಕೆ ನನಗೆ ಕೊನೆಯ time ನಲ್ಲಿ ಅವಕಾಶ ಕೊಟ್ಟಿದ್ದೀರಿ. ಬಹಳ ಸಂತೋಷ. Government has given very clearly here stating that 'My Government' is doing all things. ಈಗ 'ನಮ್ಮ ಸರ್ಕಾರ, ನಮ್ಮ ಸರ್ಕಾರ' ಎಂದು ಬುಕ್‌ನಲ್ಲಿ ಹೇಳಿಬಿಟ್ಟಿದ್ದೀರಿ. ನಮ್ಮ ಸರ್ಕಾರದಲ್ಲಿ ಏನೇನು ಮಾಡಿದ್ದಾರೆನ್ನುವುದು ನಿಜವಾಗಿಯೂ ನನಗೆ ಗೊತ್ತಿಲ್ಲ. ಕಳೆದ 8 ತಿಂಗಳಿಂದ ಬರೀ ಕುಡಿಯುವ ನೀರನ್ನು ಬಿಟ್ಟರೆ ಬೇರೆ ಯಾವ ಕೆಲಸವನ್ನು ನಾನು ಮಾಡಿಲ್ಲ. ದೇವರು ನಮಗೆ ಯಾವ ತರಹ ಆಶೀರ್ವಾದ ಮಾಡಿದ್ದಾನೆಂದು ತಿಳಿದು ಈಗ ನನಗೆ ನೋವು ಆಗಿದೆ. ಸರ್ಕಾರ ಏನಾದರೂ ಒಳ್ಳೆಯ ರೀತಿಯಾಗಿ ಕೆಲಸ ಮಾಡುತ್ತಾರೆ, ಜನ ಕೇಳಿದ ಕೆಲಸಗಳನ್ನು ಮಾಡೋಣವೆಂದು ನಾವು ಚುನಾವಣೆಯಲ್ಲಿ ಗೆದ್ದು ಬಂದಿದ್ದೇವೆ. I remember, ಏನೆಂದರೆ, ಮೂರು ಜನ ಸತ್ತು ಮೇಲೆ ಹೋಗಿದ್ದಾರೆ. ಸತ್ತು ಹೋದ ಮೇಲೆ ನಂತರ ಇವರನ್ನು ಸ್ವರ್ಗಕ್ಕೆ ಕಳುಹಿಸಬೇಕೋ ಅಥವಾ